ST. FRANCIS DE SALES COLLEGE
A FRANSALIAN INSTITUTE OF HIGHER EDUCATION AUTONOMOUS
NAAC A GRADE • AFFILIATED TO BANGALORE UNIVERSITY • AICTE APPROVED • 2(F) & 12 (B) RECOGNITION OF UGC • ISO 9001:2015 CERTIFIED
Electronics City P.O., Bengaluru - 560 100, Karnataka, INDIA (+91) 8088140679 pro@sfscollege.in www.sfscollege.in

# END SEMESTER EXAMINATION – APRIL/MAY 2026

## KANNADA - IV SEMESTER BCOM

## 25BCO41K: ವಾಣಿಜ್ಯ ಕನ್ನಡ IV

**Time: 3 Hours.** **Max. Marks: 80**

**I. ಮೂರು ಪ್ರಶ್ನೆಗಳಿಗೆ ಉತ್ತರ ಬರೆಯಿರಿ (200 ಪದಗಳಿಗೆ ಮೀರದಂತೆ)** 3x10=30

1. ಯೂಲಿಸಿಸ್ ಮತ್ತು ಅವನ ಸಂಗಡಿಗರು ರಾಕ್ಷಸನಿಂದ ಪಾರಾಗಿ ಬಂದ ಬಗೆ ಹೇಗೆ? ವಿವರಿಸಿ.
2. ಬುಡೇನ್ ಸಾಬಿಯ ಛಲದ ಬದುಕನ್ನು ಕುರಿತು ಬರೆಯಿರಿ.
3. ರುರು ಮತ್ತು ಪ್ರಮದವತಿಯರ ಕತೆಯ ವೈಶಿಷ್ಟ್ಯಯವನ್ನು ವಿವರಿಸಿ.
4. ಕೇಂದ್ರ ಲೋಕಸೇವಾ ಆಯೋಗದ ಪರೀಕ್ಷಾ ಕ್ರಮವನ್ನು ವಿವರಿಸಿ.

**II. ನಾಲ್ಕು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (100 ಪದಗಳಿಗೆ ಮೀರದಂತೆ)** 4x5=20

1. ಸಮಾಸ ಎಂದರೇನು? ಯಾವುದಾದರೂ ಎರಡು ಸಮಾಸಗಳನ್ನು ಉದಾಹರಣೆ ಸಹಿತ ವಿವರಿಸಿ.
2. ಇಂದ್ರನಿಗೆ ಕರ್ಣನು ಕವಚ ಕುಂಡಲಗಳನ್ನು ದಾನ ಮಾಡಿದ ಸಂದರ್ಭವನ್ನು ಕುರಿತು ಬರೆಯಿರಿ.
3. ಲೇಖಕಿಗೆ ಅವರಮ್ಮ ಹೇಳಿದ ಊರಿನ ಡಾಕ್ಟರರ ಕತೆಯ ಸ್ವಾರಸ್ಯವನ್ನು ತಿಳಿಸಿ.
4. ಪಾಂಡವರ ಪಕ್ಷ ಸೇರುವಂತೆ ಕೃಷ್ಣನು ಕರೆದಾಗ ಕರ್ಣನ ಪ್ರತಿಕ್ರಿಯೆಯನ್ನು ವಿವರಿಸಿ.
5. ಪ್ರಸನ್ನರು ಹೇಳುವ ಗ್ರಾಮೀಣ ಬಡತನವನ್ನು ತಿಳಿಸಿ.
6. ಕ್ಯಾನ್ಸರ್ ರೋಗಿಗಳ ಬಗೆಗೆ ಕೆಟ್ಟ ಕುತೂಹಲ ತೋರುವವರ ಬಗ್ಗೆ ಲೇಖಕಿಯ ನಿಲುವನ್ನು ವಿಶ್ಲೇಷಿಸಿ.

**III. ಕೆಳಕಂಡ ಕಂಡಿಕೆಯನ್ನು ಇಂಗ್ಲಿಷಿಗೆ ಭಾಷಾಂತರಿಸಿ.** 1x5=5

ಇವತ್ತು ಬಂಡವಾಳಶಾಹಿ ಕನಸು ನನಸಾಗಿದೆ: ಎಲ್ಲವೂ ಸರಕಾಗಿ ಪರಿವರ್ತಿತವಾಗಿದೆ. ರೈತ ಬೆಳೆದ ಹೂವು, ಸುಬ್ಬಲಕ್ಷ್ಮಿಯ ಸಂಗೀತ, ಧ್ಯಾನ, ಊಟ, ಉಪಚಾರ, ಪ್ರೇಮ, ಆಸ್ತೆ, ಅಕ್ಕರೆ, ಆರೋಗ್ಯ, ಶಿಕ್ಷಣ, ಮಾನವ ಸಂಬಂಧ...ಎಲ್ಲವೂ ಸರಕಾಗಿ ಪರಿವರ್ತಿತವಾಗಿದೆ. ಸಂಗೀತವು ಮಾರಾಟ ಮಾಡಬಲ್ಲ ಸೀಡಿಗಳಾಗಿದೆ. ಆಸ್ತೆ ಯಾನೆ ನಂಬಿಕೆಯು ಆಸ್ತಾ ಎಂಬ ಟೀವಿ ಛಾನೆಲ್ಲಾಗಿದೆ, ಆರೋಗ್ಯ ಆಸ್ಪತ್ರೆಗಳೆಂಬ ಉದ್ದಿಮೆಯಾಗಿದೆ, ಊಟವೆಂಬುದು ಹೋಟೆಲಿನಲ್ಲಿ ಸಿಕ್ಕುವ ಸರಕಾಗಿದೆ, ಶಿಕ್ಷಣವು ಡೊನೇಷನ್ನಿನ ಮೂಲಕ ಪಡೆಯಬಲ್ಲ ಸರ್ಟಿಫಿಕೇಟಾಗಿದೆ.

**IV. ಬಯೋಕಾನ್ ಕಂಪನಿಯ ಲೆಕ್ಕ ಪರಿಶೋಧಕರ ಹುದ್ದೆಗೆ ಅಭ್ಯರ್ಥನ ಪತ್ರ ಬರೆಯಿರಿ** 1x5=5

**V. ಕೆಳಕಂಡ ಸನ್ನಿವೇಶ ಆಧರಿಸಿ ಒಂದು ಕವಿತೆ/ಕತೆ ಬರೆದು ಸೂಕ್ತ ಶೀರ್ಷಿಕೆ ನೀಡಿ.** 1x5=5

ಉರಿ ಬಿಸಿಲಲ್ಲಿ ಹೊಲವನ್ನು ಉಳುವ ರೈತ

ST. FRANCIS DE SALES COLLEGE · EXCELLENCE · EFFICIENCY · TRANSFORMATION · ELECTRONICS CITY, BENGALURU

**VI. ಕೆಳಕಂಡ ಗದ್ಯ ಕಂಡಿಕೆಯನ್ನು ಸಂಭಾಷಣೆಯಾಗಿ ಪರಿವರ್ತಿಸಿ.** **1x5=5**

ಬುಡೇನ್‌ಸಾಬಿ ಸ್ವಲ್ಪ ಇಳಿದುಹೋಗಿದ್ದ. ನಿಲ್ಲುವ ತ್ರಾಣ ಕೂಡ ಇರಲಿಲ್ಲ. ಗೋಡೆಯನ್ನು ಒಂದು ಕೈಯಲ್ಲೂ, ಮಗನ ಕೈಯನ್ನು ಇನ್ನೊಂದು ಕೈಲೂ ಹಿಡಿದುಕೊಂಡು ಬಂದ. ನನ್ನನ್ನು ನೋಡಿ ಗಟ್ಟಿಯಾಗಿ ಅತ್ತುಬಿಟ್ಟ. ಕಷ್ಟಪಟ್ಟು ನನ್ನ ಕಾಲುಮುಟ್ಟಿ ನಮಸ್ಕಾರ ಮಾಡಿದ.`ಇದರ ಅಗತ್ಯ ಏನಿದೆ?' ಎಂದು ಬೈಯ್ದೆ. `ಇಲ್ಲ ಇಲ್ಲ ನೀವು ಸುಮ್ಮಿರಬೇಕು. ಸುಮ್ನೆ ನಿಂತ್ಕೋಬೇಕು ನೀವು' ಎಂದ. ಮಗಳು `ಯಾಕಪ್ಪ ಅಳ್ತಿದೀಯ' ಎಂದು ಕೇಳಿದ್ದಕ್ಕೆ ` ನಾನು ದುಃಖಕ್ಕೆ ಅಳ್ತಿಲಮ್ಮ, ನಂಗೆ ಸಂತೋಷವಾಗಿ ಕಣ್ಣೀರು ಬರ್ತಾ ಇದ್ಯಮ್ಮ' ಎಂದ. (ಈ ಹೊತ್ತಿಗೂ ಆ ಘಟನೆಯನ್ನು ನೆನಸಿಕೊಂಡರೆ ಕಣ್ಣಿನಲ್ಲಿ ನೀರು ಬರುತ್ತದೆ). `ಯಾಕೆ ಬುಡೇನ್‌ಸಾಬಿ ಹೀಗಾದೆ?' ಎಂದು ಕೇಳಿದೆ. ಆತ `ಯಾಕಾದ್ನೊ ಗೊತ್ತಿಲ್ಲ, ನನ್ನ ಕೊನೇ ದಿನಗಳು ಸಮೀಪಿಸುತ್ತಿವೆ ಅಂತ ಮನಸ್ಸಿಗನ್ನಿಸ್ತಿದೆ. ನೀವಿವತ್ತು ಬಂದ್ರಿ, ನಂಗೆ ಇನ್ಯಾವ ಆಸೆಗಳೂ ಇಲ್ಲ. ಒಂದಾಸೆ ಇತ್ತು....... ನೀವು ನಮ್ಮನೇಗ್ಬರಬೇಕು ಅಂತ. ನನ್ಮಗನ ಹತ್ರನೂ ಹೇಳಿದ್ದೆ, ಕರ್‍ಕೊಂಬಾ ಅಂತ, ನೀವೇ ಬಂದ್ಬಿಟ್ಟಿದ್ದೀರಿ. ಕೊನೆಗಾಲದಲ್ಲಿ ನಾನು ನಿಶ್ಚಿಂತೆಯಾಗಿ ಹೋಗ್ತಿದೀನಿ ಎಂದ.

**VII. ಈ ಕೆಳಗಿನ ಒಂದೊಂದು ಪ್ರಶ್ನೆಗಳಿಗೆ ಸರಿ ಉತ್ತರವನ್ನು ಗುರುತಿಸಿ ಬರೆಯಿರಿ.** **10x1=10**

1. ರಾಕ್ಷಸನು ಗುಹೆಯ ಬಾಗಿಲಿಗೆ ಏನನ್ನು ಅಡ್ಡಲಾಗಿ ಇಟ್ಟ?

   ಅ. ಮರ ಆ. ಕುರಿ ಇ. ಬಂಡೆ ಈ. ಹಡಗು

2. "ದಾಸ್ ಕ್ಯಾಪಿಟಲ್" ಕೃತಿಯ ಕರ್ತೃ ಯಾರು?

   ಅ. ಗಾಂಧೀಜಿ ಆ. ಕಾರ್ಲ್ ಮಾರ್ಕ್ಸ್ ಇ. ಬುದ್ಧ ಈ. ಆನಂದ

3. "ಅರಮನೆ" ಈ ಪದ ಯಾವ ಸಮಾಸವಾಗಿದೆ?

   ಅ. ತತ್ಪುರುಷ ಸಮಾಸ ಆ. ದ್ವಿಗು ಸಮಾಸ ಇ. ಕ್ರಿಯಾ ಸಮಾಸ ಈ. ಅಂಶಿ ಸಮಾಸ

4. ನಿರೂಪಕರು ಬುಡೇನ್‌ಸಾಬಿಗೆ ಮಾಡಿದ ಧನ ಸಹಾಯ ಎಷ್ಟು?

   ಅ. ನೂರು ಆ. ಇನ್ನೂರು ಇ. ಮುನ್ನೂರು ಈ. ಐನೂರು

5. ದಂಪತಿಗಳು ಯಾವ ಬೆಟ್ಟಕ್ಕೆ ಹೋಗಿದ್ದರು?

   ಅ. ನಂದಿ ಬೆಟ್ಟ ಆ. ಚಾಮುಂಡಿ ಬೆಟ್ಟ ಇ. ರಂಗನಾಥ ಬೆಟ್ಟ ಈ. ಮಾದೇಶ್ವರ ಬೆಟ್ಟ

6. ಲೇಖಕಿಗೆ ಯಾವ ಕಾಯಿಲೆಯಾಗಿತ್ತು?

   ಅ. ಕ್ಷಯ ಆ. ಕಾಮಾಲೆ ಇ. ಕುಷ್ಟ ಈ. ಕ್ಯಾನ್ಸರ್

7. ಜಗತ್ತು `ಮಿಥ್ಯೆ' ಎಂದವರು ಯಾರು?

   ಅ. ಶಂಕರ ಆ. ಬುದ್ಧ ಇ. ಬಸವಣ್ಣ ಈ. ಆಡಮ್ ಸ್ಮಿತ್

8. ಸ್ಪರ್ಧಾತ್ಮಕ ಪರೀಕ್ಷೆಗಳು ಲೇಖನದ ಕರ್ತೃ ಯಾರು?

   ಅ. ಪ್ರಸನ್ನ ಆ. ಜಿ. ಹರಿಪ್ರಸಾದ್ ಇ. ಸಣ್ಣರಾಮ ಈ. ಸಂಧ್ಯಾ ಹೆಗಡೆ

9. ಒಕ್ಕಣ್ಣಿನ ರಾಕ್ಷಸ ಯಾರು?

   ಅ. ಒಡಿಸ್ಯೂಸ್ ಆ. ಪಾಲಿಫೀಮಸ್ ಇ. ಯೂಲಿಸಿಸ್ ಈ. ಮೇರನ್

10. ಫಣಿಕೇತು ಎಂದರೆ ಯಾರು?

   ಅ. ಕರ್ಣ ಆ. ಇಂದ್ರ ಇ. ಕೃಷ್ಣ ಈ. ದುರ್ಯೋಧನ

*******

ST. FRANCIS DE SALES COLLEGE · EXCELLENCE · EFFICIENCY · TRANSFORMATION · ELECTRONICS CITY, BENGALURU